KARNATAKA LEGISLATIVE ASSEMBLY RESEARCH AND REFERENCE

PAPER CLIPPINGS

DEPARTMENT / SUBJECT:

NAME OF THE NEWS PAPER: ಉದಯವಾಣಿ

DATE: 07/03/2020

# ಹಳೇ ಬಸ್ಸು ಅಪಘಾತ ಮಾಡಲ್ಲ!

## ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಮಾತು ಕೇಳಿ ನಗೆಗಡಲಲ್ಲಿ ತೇಲಿದ ಸದನ

**ವಿಧಾನ ಪರಿಷತ್:** 'ವಯಸ್ಸಾದವರು ಜಾಗರೂಕವಾಗಿ ಓಡಾಡುತ್ತಾರೆ. ಹಾಗೆಯೇ ಹಳೇ ಬಸ್‌ಗಳನ್ನು ಜಾಗರೂಕವಾಗಿ ಓಡಿಸಲಾಗುತ್ತಿದೆ. ಹಳೆಯ ಬಸ್ ಅಪಘಾತಕ್ಕೆ ಕಾರಣವಾಗಲ್ಲ' ಎಂದು ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಹೇಳಿದರು.

ಬಸ್ ಅಪಘಾತ ಕುರಿತು ಚುಕ್ಕೆ ಗುರುತಿನ ಪ್ರಶ್ನೆ ಕೇಳಿದ ಬಿಜೆಪಿ ಸದಸ್ಯ ಡಾ.ವೈ.ಎ.ನಾರಾಯಣಸ್ವಾಮಿ, ಹೆಚ್ಚುತ್ತಿರುವ ಬಿಎಂಟಿಸಿ ಬಸ್ ಅಪಘಾತಕ್ಕೆ ಹಳೇ ಬಸ್‌ಗಳ ತಾಂತ್ರಿಕ ದೋಷ ಕಾರಣ, ರಾಜ್ಯದ ಸಾರಿಗೆ ಬಸ್‌ಗಳ ತಾಂತ್ರಿಕ ದೋಷಗಳಿಂದ ಅನೇಕ ಅಪಘಾತಗಳಾಗುತ್ತಿವೆ. ಕಳಪೆ ಗುಣಮಟ್ಟದ ಪರಿಕರ ಬಳಸುವುದರಿಂದ ಹೀಗಾಗುತ್ತಿದೆ ಎಂದರು.

ಇದು ಸ್ವಾರಸ್ಯಕರ ಚರ್ಚೆಗೆ ನಾಂದಿ ಹಾಡಿತು. ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ, ಬಸ್‌ಗಳು ಹಳೆಯದಾಗಿದೆ ಎನ್ನುವ ಕಾರಣಕ್ಕೆ ಅಪಘಾತ ಸಂಭವಿಸುತ್ತಿವೆ ಎನ್ನುವುದು ಸತ್ಯಕ್ಕೆ ದೂರ. ಹಳೆಯದಾದಷ್ಟು ಜಾಗರೂಕತೆ ಹೆಚ್ಚು. ವಯಸ್ಸಾದವರು ಜಾಗರೂಕರಾಗಿ ಓಡಾಡುತ್ತಾರೆ. ಹಾಗೆಯೇ ಚಾಲಕರೂ ಹಳೇ ಬಸ್‌ಗಳನ್ನು ಜಾಗರೂಕತೆಯಿಂದ ಓಡಿಸುತ್ತಾರೆಂದರು.

ಇದಕ್ಕೆ ದನಿಗೂಡಿಸಿದ ಆಡಳಿತ ಪಕ್ಷದ ಸದಸ್ಯೆ ತೇಜಸ್ವಿನಿಗೌಡ, ಗ್ರಾಮೀಣ ಭಾಗಗಳಲ್ಲಿ ಇಂದು ಹಳೇ ಬಸ್‌ಗಳನ್ನು ಓಡಿಸಲಾಗುತ್ತಿದೆ. ಅಲ್ಲಿನ ಜನರಿಗೂ ಉತ್ತಮ ಬಸ್‌ಗಳಲ್ಲಿ ಓಡಾಡುವ ಆಸೆ ಇರುತ್ತದೆ ಈ ರೀತಿಯ ತಾರತಮ್ಯ ಸರಿಯಲ್ಲ ಎಂದರು. ಮಾತು ಮುಂದುವರಿಸಿದ ಉಪ ಮುಖ್ಯಮಂತ್ರಿ, ತಾಂತ್ರಿಕ ದೋಷದಿಂದ ಕೇವಲ ಒಂದು ಅಪಘಾತ ದಾಖಲಾಗಿದೆ. ಹೀಗಾಗಿ ಬಸ್‌ಗಳು ಹಳೆಯದಾಗಿರುವುದೇ ಅಪಘಾತಕ್ಕೆ ಕಾರಣ ಎನ್ನುವುದು ಸುಳ್ಳು ಎಂದರು.



▪ 10 ವರ್ಷ ಬಿಟ್ಟು ರೇವಣ್ಣ ಕೋಲು ಹಿಡಿದುಕೊಂಡು ಜಾಗರೂಕತೆಯಿಂದ ಬರುತ್ತಾರೆ

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯ ಎಚ್.ಎಂ.ರೇವಣ್ಣ, ಈ ವಾದವನ್ನೂ ಒಪ್ಪಲು ಸಾಧ್ಯವಿಲ್ಲ, ಬಸ್ ಹಾಗೂ ಮಾನವರನ್ನು ಹೋಲಿಸಲು ಆಗುವುದಿಲ್ಲ, ಬಸ್ ಹಳೆಯದಾದಷ್ಟು ಸಮಸ್ಯೆ ಹೆಚ್ಚೆಂದರು.

**ರೇವಣ್ಣ ಕೋಲು ಹಿಡಿದು ಬರುತ್ತಾರೆ:** ಇದಕ್ಕೆ ಪ್ರತಿಕ್ರಿಯೆ ನೀಡಿದ ಡಿಸಿಎಂ ಸವದಿ, 10 ವರ್ಷ ಬಿಟ್ಟು ರೇವಣ್ಣ ಅವರು ವಿಧಾನಸೌಧಕ್ಕೆ ಬರುವಾಗ ಒಂದು ಕೋಲು ಹಿಡಿದುಕೊಂಡು ಜಾಗರೂಕತೆಯಿಂದ ಬರುತ್ತಾರೆಯೇ ಹೊರತು ಈಗಿನಂತೆ ಉತ್ಸಾಹದಿಂದ ಬರಲಾಗುವುದಿಲ್ಲ ಎಂದಾಗ ಸದನ ನಗೆಗಡಲಲ್ಲಿ ತೇಲಿತು.

### ಎಲ್ಲರಿಗೂ ಉಚಿತ ಬಸ್ ಪಾಸ್ ನೀಡಿ

ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಲು ಅನುಸರಿಸುತ್ತಿರುವ ವ್ಯವಸ್ಥೆ ಬಗ್ಗೆ ಸದಸ್ಯ ಮರಿತಿಬ್ಬೇಗೌಡ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಡಿಸಿಎಂ ಸವದಿ, ರಿಯಾಯ್ತಿ ದರದ ಬಸ್‌ಪಾಸ್ ಪಡೆಯಲು ವಿದ್ಯಾರ್ಥಿಗಳು ಶಾಲಾ ಗುರುತಿನ ಚೀಟಿ ಹಾಗೂ ಶುಲ್ಕ ಪಾವತಿಸಿದ ರಶೀದಿ ನೀಡಬೇಕು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುತ್ತಿರುವುದರಿಂದ ಜಾತಿ ಪ್ರಮಾಣ ಪತ್ರ ಲಗತ್ತಿಸಬೇಕಾಗಿದೆ ಎಂದರು.

ಆ ವೇಳೆ ಸಲಹೆ ನೀಡಿದ ಹಿರಿಯ ಸದಸ್ಯ ಬಸವರಾಜ ಹೊರಟ್ಟಿ, ರಾಜ್ಯದಲ್ಲಿ ಪರಿಶಿಷ್ಟ ಜಾತಿ, ವರ್ಗದ ವಿದ್ಯಾರ್ಥಿಗಳಿಗೆ ಮಾತ್ರ ಉಚಿತ ಬಸ್ ಪಾಸ್ ಒದಗಿಸಿದರೆ ಸಾಲದು. ಮಕ್ಕಳು ದೇವರಿದ್ದಂತೆ. ಬೇರೆ ವರ್ಗಗಳಲ್ಲೂ ಆರ್ಥಿಕ ಸಮಸ್ಯೆ ಎದುರಿಸುವ ಕುಟುಂಬದ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಜಾತಿ ಆಧಾರದ ಮೇಲೆ ಬಸ್ ಪಾಸ್ ನೀಡದೆ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೂ ಬಸ್‌ಪಾಸ್ ವಿತರಿಸುವಂತೆ ಮನವಿ ಮಾಡಿದರು.

ಡಿಸಿಎಂ ಲಕ್ಷ್ಮಣ ಸವದಿ ಪ್ರತಿಕ್ರಿಯಿಸಿ, ಈ ಕುರಿತು ಪರಿಶೀಲನೆ ನಡೆಸಲಾಗುತ್ತದೆ. ಆಗ ಹೊರಟ್ಟಿಯವರ ಸಲಹೆಯನ್ನೂ ಪಡೆಯಲಾಗುತ್ತದೆ ಎಂದರು.